**Witness is present and duly sworn on 26.11.2025.**

**Examination in chief for the plaintiff : by Sri. PR counsel for plaintiff :**

I have filed my chief examination in affidavit. The contents of the affidavit are true and correct and it bears my signature.

(Defendant counsel prays time for cross examination. Time granted).

(Computerized to my dictation in the open court as deposed by the witness.)

**R. O. I. & A. C.,**

**(PRASHANTHI.G)**
**IX Addl. C.C. & S.J., Bengaluru.**

**ದಿ:04-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು : ಪ್ರತಿವಾದಿ ಪರ ಶ್ರೀ. ಸಿ.ಪಿ ವಕೀಲರಿಂದ :**

1. ಶಾಪ್ ನಂ.2, 8*8 ಅಡಿ ಅಳತೆಯ ಶಾಪ್ ನಲ್ಲಿ ನಾನು ಬಾಡಿಗೆದಾರನಾಗಿದ್ದೆ ಎಂದು ತೋರಿಸಲು ನನ್ನ ಬಳಿ ಯಾವುದೇ ಲಿಖಿತ ಕಾಗದ ಪತ್ರಗಳು ಇಲ್ಲ. 1976 ರಿಂದಲೇ ನಾನು ಬಾಡಿಗೆದಾರನಾಗಿದ್ದೆ. 1976 ರಿಂದ 2015 ರವರೆಗೂ ನಾನು ಶಾಪ್ ನಂ.2 ರಲ್ಲಿ ಬಾಡಿಗೆದಾರನಾಗಿದ್ದೆ. ಸದರಿ ಶಾಪ್ ನಲ್ಲಿ ನಾನು

ಬಾಡಿಗೆದಾರನಾಗಿದ್ದೇನೆ ಎಂದು ತೋರಿಸಲು ನನ್ನ ಬಳಿ ಬೇರೆ ದಾಖಲೆಗಳು ಇವೆಯಾ ಎಂದರೆ ಸಾಕ್ಷಿ ಆ ಸಂದರ್ಭದಲ್ಲಿ ನನ್ನ ಬಳಿ ಮುನಿಸಿಪಾಲಿಟಿಯವರು ನೀಡಿದ ಲೈಸೆನ್ಸು, ಪ್ರೊಫೆಷನಲ್ ಲೈಸೆನ್ಸು ಮತ್ತು ಸೇಲ್ಸ್ ಟ್ಯಾಕ್ಸ್ ಇತ್ತು. ಆದರೆ ಈಗ ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ ಮತ್ತು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

2. ಧನರಾಜ್ ಎಂಬುವವರು ನನ್ನ ಪಕ್ಕದಲ್ಲಿ ಒಂದು ವಕೀಲರ ಕಚೇರಿ ಇಟ್ಟುಕೊಂಡಿದ್ದರು. ಈ ದಾವೆಯ 3 ನೇ ಪ್ರತಿವಾದಿ ಶಶಿಕಲಾ ಅವರು ಧನರಾಜ್ ಅವರನ್ನು ಸದರಿ ಜಾಗದಿಂದ ತೆರವುಗೊಳಿಸಲು ಒಂದು ದಾವೆ ಹಾಕಿದ ವಿಚಾರ ನನಗೆ ಗೊತ್ತಿಲ್ಲ. ಸದರಿ ದಾವೆ ಮಾನ್ಯ ಉಚ್ಛ ನ್ಯಾಯಾಲಯದವರೆಗೂ ಹೋಗಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಾಜಿಯಾಗಿ ಶಶಿಕಲಾ ಅವರಿಗೆ ಸದರಿ ಜಾಗವನ್ನು ಸ್ವಾಧೀನಕ್ಕೆ ನೀಡಿದ ವಿಚಾರ ನನಗೆ ಗೊತ್ತಿಲ್ಲ.

3. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.4 ರಲ್ಲಿ ನಾನು ಆರ್.ಕೃಷ್ಣಪ್ಪ ಅವರ ಜಾಗವನ್ನು ಖರೀದಿಸಿದ ನಂತರ ನಾನು ಅವರಿಗೆ ರೂ.2,00,000/-ವನ್ನು 1981 ರಲ್ಲಿ ಮುಂಗಡ ಹಣವಾಗಿ ನೀಡಿದ್ದೇನೆ ಎಂದು ಹೇಳಿದ್ದು ಆ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು 1976 ರಿಂದ ಎ ಶಾಪ್ ನಲ್ಲಿದ್ದೇನೆ. ನಾನು ಸದರಿ ಶಾಪನ್ನು ಬಿಡುವವರೆಗೂ ಅದನ್ನು ಎ ಶಾಪ್ ಎಂದೇ ಕರೆಯುತ್ತಿದ್ದರು.

4. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಚೆನ್ನಮ್ಮ ಅವರಿಗೂ ಸಹ ನಾನು ಹೆಚ್ಚುವರಿ ರೂ.2,00,000/-ವನ್ನು ಮುಂಗಡ ಹಣವಾಗಿ ನೀಡಿದ್ದೇನೆ ಎಂದು ಹೇಳಿದ್ದು ಆ ಬಗ್ಗೆ ದಾಖಲೆಗಳಿವೆಯಾ ಎಂದರೆ ಸಾಕ್ಷಿ ನಾನು ಚೆನ್ನಮ್ಮ ಅವರಿಗೆ ಮುಂಗಡ ಹಣ ನೀಡಿಲ್ಲ ಎಂದು ನುಡಿಯುತ್ತಾರೆ.

5. ವೇದಾಚಲಂ ಅವರು ನನ್ನ ಅಂಗಡಿಯ ಬಲಭಾಗದ ಶಾಪಿನಲ್ಲಿ ಬಾಡಿಗೆದಾರರಾಗಿದ್ದರು. ವೇದಾಚಲಂ ಅವರು 1979 ರಿಂದ 2015 ನಂತರ ನಾನು ಖಾಲಿ ಮಾಡಿದ ನಂತರವೂ ಸಹ ಅಲ್ಲಿಯೇ ಇದ್ದರು. ವೇದಾಚಲಂ ಅವರು ಈಗ ಅಲ್ಲಿ ಇಲ್ಲ.

6. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.6 ರಲ್ಲಿ ನಾನು ಸದರಿ ಸ್ವತ್ತನ್ನು ತೆರವುಗೊಳಿಸುವ ಬಗ್ಗೆ ಹೇಳಿ ನಾನು ನೀಡಿದ ಮುಂಗಡ ಹಣವನ್ನು ವಾಪಾಸು ನೀಡುವಂತೆ ಕೇಳಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ.

7. ವೇದಾಚಲಂ ಅವರು 2015 ರಲ್ಲಿ ಚೆನ್ನಮ್ಮ ಅವರ ಜೊತೆ ಕ್ರಯದ ಕರಾರು ಪತ್ರ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಾಯಿತು. ಅದನ್ನು ನನಗೆ ವೇದಾಚಲಂ ಅವರೇ ಖುದ್ದಾಗಿ ನನ್ನ ಬಳಿ ಹೇಳಿದ್ದರು. ವೇದಾಚಲಂ ಅವರನ್ನು ನನಗೆ 1979 ರಿಂದ ಪರಿಚಯ. ಈಗ ನನಗೆ ಅವರ ಸಂಪರ್ಕ ಇಲ್ಲ. ಈಗ್ಗೇ 6 ತಿಂಗಳ ಮೊದಲು ನಾನು ವೇದಾಚಲಂ ಅವರನ್ನು ಸಂಪರ್ಕಿಸಿದ್ದೆ. ಈ ದಾವೆ ಹಾಗೂ ಕಟ್ಟಡಕ್ಕೆ ಸಂಬಂಧಿಸಿದಂತೆ ನಾನು ಅವರನ್ನು ಸಂಪರ್ಕಿಸಿಲ್ಲ.

ಆರು ತಿಂಗಳ ಮೊದಲು ನಾನು ಅವರನ್ನು ಸಂಪರ್ಕಿಸಿದಾಗ ಅವರು ಆರೋಗ್ಯವಾಗಿಯೂ ಇದ್ದರೂ ಮತ್ತು ನನ್ನ ಜೊತೆ ಅನ್ಯೋನ್ಯವಾಗಿಯೂ ಇದ್ದರು. 6 ತಿಂಗಳ ಮೊದಲು ವೇದಾಚಲಂ ಅವರು ನನ್ನ ಬಳಿ ಈ ದಾವೆಯಲ್ಲಿ ಸಾಕ್ಷಿದಾರರಾಗಿ ಬರಬೇಕು ಎಂದು ಕೇಳಿಕೊಂಡಿದ್ದರು. ನನಗೂ ಹಾಗೂ ವೇದಾಚಲಂ ಅವರಿಗೂ ಯಾವುದೇ ಹಣದ ವ್ಯವಹಾರ ಇಲ್ಲ. ವೇದಾಚಲಂ ಅವರ ಪರಿಚಯ ಆದ ನಂತರ ಇಲ್ಲಿಯವರೆಗೂ ಸಹ ನಾನು ಅವರ ಜೊತೆ ಹಣ ತೆಗೆದುಕೊಳ್ಳುವುದಾಗಲೀ ಕೊಡುವುದಾಗಲೀ ಮಾಡಿಲ್ಲ. ಸಾಕ್ಷಿ ಮುಂದುವರಿದು ಮುಂಗಡ ಹಣವನ್ನು ವೇದಾಚಲಂ ಅವರೇ ನನಗೆ ನೀಡಿದ್ದರು ಎಂದು ನುಡಿಯುತ್ತಾರೆ. 2015 ರಲ್ಲಿ ಮುಂಗಡ ಹಣವನ್ನು ವೇದಾಚಲಂ ಅವರು ನನಗೆ ನೀಡಿದ್ದರು. ವೇದಾಚಲಂ ಅವರು ನನಗೆ ಮುಂಗಡ ಹಣ ವಾಪಾಸು ನೀಡುವ ಸಂದರ್ಭದಲ್ಲಿ ಬೇರೆ ಯಾರೂ ಇದ್ದಿರಲಿಲ್ಲ. ವೇದಾಚಲಂ ಅವರು ನನಗೆ ಹಣ ವಾಪಾಸು ನೀಡಿದ್ದಾರೆ ಮತ್ತು ನಾನು ಅವರಿಗೆ ಸ್ವಾಧೀನ ವಾಪಾಸು ಕೊಟ್ಟಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೇದಾಚಲಂ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೂ.250/-ಗಳಿಗಾಗಲೀ ಅಥವಾ ರೂ.1,600/-ರ ಬಾಡಿಗೆ ಪಾವತಿ ಮಾಡುತ್ತಿದ್ದೆ ಎಂಬ ಬಗ್ಗೆಯಾಗಲೀ ನನ್ನ ಬಳಿ ಯಾವುದೇ ಕಾಗದ ಪತ್ರಗಳು ಇಲ್ಲ. ಸಾಕ್ಷಿ ಮುಂದುವರಿದು ಅವರು ಯಾವುದೇ ಕಾಗದ ಪತ್ರಗಳನ್ನು ನೀಡುತ್ತಿರಲಿಲ್ಲ ಎಂದು ನುಡಿಯುತ್ತಾರೆ.

8. ದಾವಾ ಸ್ವತ್ತಿಗೆ ನಾನು ಕಳೆದ 4 ವರ್ಷಗಳ ಮೊದಲು ಕೊನೆಯ ಬಾರಿ ಹೋಗಿದ್ದೆ. ನಾನು ಹೋದ ಸಂದರ್ಭದಲ್ಲಿ ವಕೀಲರ ಕಚೇರಿ ಒಂದನ್ನು ಬಿಟ್ಟರೆ ಬಾಕಿ ಉಳಿದ ಎಲ್ಲಾ ಪೋರ್ಷನ್ ಗಳನ್ನು ಒಡೆದು ಹಾಕಿದ್ದರು. ಅದನ್ನು ಯಾರು ಕೆಡವಿ ಹಾಕಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. 2020 ನೇ ಇಸವಿಯಲ್ಲಿ ನಾನು ಕೊನೆಯ ಬಾರಿ ನೋಡಿದಾಗ ಸದರಿ ವಕೀಲರ ಕಚೇರಿ ರನ್ನಿಂಗ್ ಕಂಡೀಷನ್ ನಲ್ಲಿ ಇತ್ತು.

9. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ದಾವಾ ಸ್ವತ್ತಿನಲ್ಲಿ ಬಾಡಿಗೆಯಲ್ಲಿದ್ದೆ ಮತ್ತು ಬಾಡಿಗೆ ಕೊಡುತ್ತಿದ್ದೆ, ಮುಂಗಡ ಹಣ ವಾಪಾಸು ಕೇಳಿದ್ದೆ ಎಂಬ ಎಲ್ಲಾ ವಿಚಾರಗಳನ್ನು ವೇದಾಚಲಂ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಇದ್ದ ಧನರಾಜ್ ಅವರನ್ನು 2015 ರಲ್ಲಿ ನಾನು ತೆರವುಗೊಳಿಸಿದ ನಂತರ ಅವರ ಸಂಪರ್ಕದಲ್ಲಿ ಇಲ್ಲ.

ಮರು ವಿಚಾರಣೆಃ ವಾದಿ ಪರ ವಕೀಲರಿಂದ ಃ

1. ನನ್ನ ಪಕ್ಕದಲ್ಲಿ ಯಾರು ಬಾಡಿಗೆದಾರರಾಗಿದ್ದರು ?

ಉತ್ತರ ಃ ವೇದಾಚಲಂ.

(ಸದರಿ ಪ್ರಶ್ನೆಗೆ ಈಗಾಗಲೇ ಸಾಕ್ಷಿದಾರರು ಉತ್ತರ ನೀಡಿದ ಕಾರಣ ಸದರಿ ಪ್ರಶ್ನೆಯನ್ನು ನ್ಯಾಯಾಲಯ ತಿರಸ್ಕರಿಸಿದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.